ಕರ್ನಾಟಕ ಸರ್ಕಾರ
**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ**

**ವಾರ್ತಾ ಸೌಧ, ಸಂಖ್ಯೆ : 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.**

**ಸಂಖ್ಯೆ : ವಾಇ : ಜಂ ನಿ : ಸುಮಪ : 2020–21 :** **ಜುಲೈ 24, 2020**

# ಪತ್ರಿಕಾ ಆಮಂತ್ರಣ

ಬೆಂಗಳೂರು, ಜುಲೈ 24 (ಕರ್ನಾಟಕ ವಾರ್ತೆ):

1. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಪೂರ್ವ ವಲಯದ ವ್ಯಾಪ್ತಿಯಲ್ಲಿ ಕೋವಿಡ್–19 ಸೋಂಕಿತರ ಚಿಕಿತ್ಸೆ ಸಂಬಂಧ ಕೈಗೊಳ್ಳಲಾದ ಕ್ರಮಗಳ ಬಗ್ಗೆ ಪರಿಶೀಲನೆ

ವಿ.ಸೋಮಣ್ಣ, ವಸತಿ ಹಾಗೂ ಪೂರ್ವವಲಯದ ಉಸ್ತುವಾರಿ ಸಚಿವರು

**ದಿನಾಂಕ: 25–07–2020, ಶನಿವಾರ**
**ಸಮಯ: ಬೆಳಿಗ್ಗೆ 11–00 ಗಂಟೆಗೆ, ಸ್ಥಳ : ಶಿವಾಜಿನಗರದ ಬ್ರಾಡ್‌ವೇ ಆಸ್ಪತ್ರೆ ಭೇಟಿ ಹಾಗೂ ಪರಿಶೀಲನೆ**

**ಸಮಯ: ಅಪರಾಹ್ನ 12–00 ಗಂಟೆಗೆ, ಸ್ಥಳ: ಇಂದಿರಾನಗರದ ಇ.ಎಸ್.ಐ. ಆಸ್ಪತ್ರೆ ಭೇಟಿ ಹಾಗೂ ಪರಿಶೀಲನೆ,**

**ಸಮಯ: ಅಪರಾಹ್ನ 1–00 ಗಂಟೆಗೆ, ಸ್ಥಳ: ಶಾಂತಿನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಪ್ರೈಮ್‌ರೋಸ್ ರಸ್ತೆಯಲ್ಲಿರುವ ಕೋವಿಡ್ ಕೇರ್ ಸೆಂಟರ್‌ಗೆ ಭೇಟಿ ಹಾಗೂ ಪರಿಶೀಲನೆ**

2. **ವೀಡಿಯೋ ಸಂವಾದ ಹಾಗೂ ಪತ್ರಿಕಾಗೋಷ್ಠಿ**

ರಾಜ್ಯದಲ್ಲಿ ಮುಂಗಾರು ಪ್ರಾರಂಭವಾಗಿರುವ ಹಿನ್ನೆಲೆಯಲ್ಲಿ ಪ್ರವಾಹ ಮತ್ತು ಭೂ–ಕುಸಿತದ ಬಗ್ಗೆ ಮುಂದೆ ತೆಗೆದುಕೊಳ್ಳಬಹುದಾದ ಹಾಗೂ ಈಗಾಗಲೇ ತೆಗೆದುಕೊಂಡಿರುವ ಕ್ರಮಗಳ ಕುರಿತಾಗಿ ಜಿಲ್ಲಾಧಿಕಾರಿಗಳೊಂದಿಗೆ ವಿಡಿಯೋ ಸಂವಾದ

**ಆರ್. ಅಶೋಕ್, ಕಂದಾಯ ಸಚಿವರು**

**ದಿನಾಂಕ: 25–07–2020, ಶನಿವಾರ, ಸಮಯ: ಬೆಳಗ್ಗೆ 11.00 ಗಂಟೆ, ಕೊಠಡಿ ಸಂ. 313, ವಿಧಾನಸೌಧ,**

**ಪತ್ರಿಕಾಗೋಷ್ಠಿ: ಮಧ್ಯಾಹ್ನ 12.30 ಸ್ಥಳ: ಕೊಠಡಿ ಸಂಖ್ಯೆ: 313, ವಿಧಾನಸೌಧ, ಬೆಂಗಳೂರು**

## ಪತ್ರಿಕಾ ಪ್ರಕಟಣೆ

## ಸಚಿವರ ಪ್ರವಾಸ

ಬೆಂಗಳೂರು, ಜುಲೈ 24 (ಕರ್ನಾಟಕ ವಾರ್ತೆ):

ನಗರಾಭಿವೃದ್ಧಿ ಹಾಗೂ ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ.ಬಸವರಾಜ ಇವರು ಜುಲೈ 27 ರಂದು ದಾವಣಗೆರೆ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ಅಂದೇ ಕೇಂದ್ರ ಸ್ಥಾನಕ್ಕೆ ಹಿಂದಿರುಗುವರು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಪ್ರಗತಿಪರ ರೈತರ ನೇಮಕ

ಬೆಂಗಳೂರು, ಜುಲೈ 24 (ಕರ್ನಾಟಕ ವಾರ್ತೆ):

ರಾಯಚೂರಿನ ಕೃಷಿ ವಿಜ್ಞಾನ ವಿಶ್ವವಿದ್ಯಾಲಯದ ಆಡಳಿತ ಮಂಡಳಿಯ ಈ ಕೆಳಕಂಡ ಪ್ರಗತಿಪರ ರೈತರನ್ನು ರಾಜ್ಯಪಾಲರ ಹಾಗೂ ಸಂಬಂಧಪಟ್ಟ ವಿಶ್ವವಿದ್ಯಾಲಯದ ಉಪಕುಲಪತಿಗಳ ಆದೇಶದನ್ವಯ ನಿಯಮಾನುಸಾರ ನೇಮಕ ಮಾಡಲಾಗಿದೆ.

1. ಮಹಂತೇಶಗೌಡ ಪಾಟೀಲ್ (ಸಾ.ವರ್ಗ)–ಕೊಪ್ಪಳ

2. ಜಿ.ಶ್ರೀಧರ್ ಕೇಸರ ಹಟ್ಟಿ (ಸಾ.ವರ್ಗ)–ಕೊಪ್ಪಳ ಗಂಗಾವತಿ ಜಿಲ್ಲೆ.

3. ಸುನಿಲ್ (ಪರಿಶಿಷ್ಟ ಜಾತಿ) –ರಾಯಚೂರು

**ಬೆಂಗಳೂರು ಕೃಷಿ ವಿಜ್ಞಾನಿಗಳ ವಿಶ್ವವಿದ್ಯಾಲಯ ಆಡಳಿತ ಮಂಡಳಿಯ ಈ ಕೆಳಕಂಡ ಪ್ರಗತಿಪರ ರೈತರನ್ನು ನೇಮಿಸಿದೆ.**

1. ದಯಾನಂದ (ಸಾ.ವರ್ಗ)–ಬೆಂಗಳೂರು

2. ಸುರೇಶ್ ಎಂ. (ಸಾ.ವರ್ಗ)–ಬೆಂಗಳೂರು

3. ಶ್ರೀರಾಮ (ಪ.ಜಾ)– ಬಾಗೇಪಲ್ಲಿ, ಚಿಕ್ಕಬಳ್ಳಾಪುರ ಜಿಲ್ಲೆ.

**ಧಾರವಾಡ ಕೃಷಿ ವಿಜ್ಞಾನಿಗಳ ವಿಶ್ವವಿದ್ಯಾಲಯದ ಆಡಳಿತ ಮಂಡಳಿ ಈ ಕೆಳಕಂಡ ಪ್ರಗತಿಪರ ರೈತರನ್ನು ನೇಮಿಸಿದೆ.**

1. ಯಲ್ಲನಗೌಡ ನಿಂಜನಗೌಡ ಪಾಟೀಲ್ (ಸಾಮಾನ್ಯ ವರ್ಗ)– ಕಲ್ಲಟಗಿ ತಾಲ್ಲೂಕು, ಧಾರವಾಡ ಜಿಲ್ಲೆ.

2. ಮಲ್ಲೇಶ ಪಿ. (ಪ.ಜಾತಿ) – ವಿಜಯಪುರ

## ಅಂತರ್ಜಾಲ ಉಪನ್ಯಾಸ ಸರಣಿ ಕಾರ್ಯಕ್ರಮ

ಬೆಂಗಳೂರು, ಜುಲೈ 24 (ಕರ್ನಾಟಕ ವಾರ್ತೆ):

ಕರ್ನಾಟಕ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ (ಕೆಸ್ಟೆಪ್ಸ್) ಹಾಗೂ 'ತಾರೇಜಮೀನ್ ಪರ್ ಬೆಂಗಳೂರು' ಇವರ ಸಹಯೋಗದೊಂದಿಗೆ ಶಿಕ್ಷಕರನ್ನು ವಿಜ್ಞಾನ ಕಲಿಕೆಯಲ್ಲಿ ಉತ್ಸುಕರಾಗಿಸುವ ನಿಟ್ಟಿನಲ್ಲಿ ವಿಜ್ಞಾನ ಅಂತರ್ಜಾಲ (virtual) ಉಪನ್ಯಾಸ ಸರಣಿ ಕಾರ್ಯಕ್ರಮವನ್ನು ಜುಲೈ 27 ರಂದು ಪ್ರಾರಂಭಿಸಲಾಗುವುದು.

ಈ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಶಿಕ್ಷಣ ತಜ್ಞರಾದ ಡಾ॥ ಗುರುರಾಜ ಕರ್ಜಗಿ, ನಿರ್ದೇಶಕರು, ವಿಶ್ವೇಶ್ವರಯ್ಯ ಕೈಗಾರಿಕ ಮತ್ತು ತಂತ್ರಜ್ಞಾನ ಸಂಗ್ರಹಾಲಯ ಹಾಗೂ ಖ್ಯಾತ ಶಿಕ್ಷಣ ತಜ್ಞ ಮದನಗೋಪಾಲ, ಮುಂಬೈನ ನೆಹರು ವಿಜ್ಞಾನ ಕೇಂದ್ರದ ನಿರ್ದೇಶಕ ಶಿವಪ್ರಸಾದ್ ಖೇನೆದ್, ಬೆಂಗಳೂರು ಜವಹರಲಾಲ್‌ನೆಹರು ತಾರಾಲಯದ ನಿವೃತ್ತ ನಿರ್ದೇಶಕರಾದ ಡಾ. ಬಿ. ಎಸ್. ಶೈಲಜಾ, ಖ್ಯಾತ ಶಿಕ್ಷಣ ತಜ್ಞರಾದ ಚೇತನ್ ರಾಮ್ ಮುಂತಾದವರು ಈ ಉಪನ್ಯಾಸ ಸರಣಿ ಕಾರ್ಯಕ್ರಮವನ್ಮು ನಿರ್ವಹಿಸಿಕೊಡಲಿದ್ದಾರೆ. ಆಸಕ್ತರು www.tarezameenpar.com ಜಾಲತಾಣದಲ್ಲಿ ನೋಂದಾಯಿಸಿಕೊಳ್ಳಬಹದು.

## ಜೆ.ಎಸ್.ಎಸ್ ನಲ್ಲಿ ಕಾರ್ಗಿಲ್ ವಿಜಯ ದಿವಸ್ ನಿಮಿತ್ತ ಆನ್‌ಲೈನ್ ಕ್ವಿಜ್

ಬೆಂಗಳೂರು, ಜುಲೈ 24 (ಕರ್ನಾಟಕ ವಾರ್ತೆ):

ಕಾರ್ಗಿಲ್ ವಿಜಯ ದಿವಸದ ನಿಮಿತ್ತ ರಾಷ್ಟ್ರಮಟ್ಟದ ಇ-ಕ್ವಿಜ್ ಸ್ಪರ್ಧೆಯನ್ನು ದಿನಾಂಕ 25.07.2020 ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಜೆ.ಎಸ್.ಎಸ್ ಕಲಾ, ವಾಣಿಜ್ಯ ಹಾಗೂ ಎಸ್.ಕೆ ಗುಬ್ಬಿ ವಿಜ್ಞಾನ ಮಹಾವಿದ್ಯಾಲಯದ ಎನ್.ಸಿ.ಸಿ ವಿಭಾಗದ ವತಿಯಿಂದ ಆಯೋಜಿಸಲಾಗಿದೆ.

ಆಸಕ್ತ ವಿದ್ಯಾರ್ಥಿಗಳು ಭಾಗವಹಿಸಲು ಜಿ-ಮೇಲ್ ಐ.ಡಿ ಹೊಂದಿರಬೇಕು ಭಾಗವಹಿಸುವ ವಿದ್ಯಾರ್ಥಿಗಳು ವಾಟ್ಸ್‌ಆಪ್ ಮೂಲಕ ಸಂಪರ್ಕಿಸಿ JSS N-QUIZ ಎಂದು 9741165199 ಸಂಖ್ಯೆಗೆ ವಾಟ್ಸ್‌ಆಪ್ ಮಾಡಿದರೆ ಲಿಂಕ್ ದೊರೆಯುತ್ತದೆ. ಈ ಮೂಲಕ ಭಾಗವಹಿಸಬೇಕು. ಪ್ರತಿಶತ 60% ಕ್ಕಿಂತ ಹೆಚ್ಚು ಅಂಕ ಪಡೆದರೆ ಈ-ಕ್ವಿಜ್ ಪ್ರಮಾಣ ಪತ್ರ ನಿಮಗೆ ಆನ್‌ಲೈನ್ ಮೂಲಕ ತಮ್ಮ ಇ-ಮೇಲ್ ಗೆ ತಲುಪಿಸಲಾಗುತ್ತದೆ. ಹೆಚ್ಚಿನ ಮಾಹಿತಿಯನ್ನು ಎನ್.ಸಿ.ಸಿ ಅಧಿಕಾರಿಗಳಾದ ಶ್ರೀ ವಿಜಯಕುಮಾರ ದೇಶಭಾಗ 9741165199 ಗೆ ಕರೆ ಮಾಡಿ ಪಡೆಯಬಹುದು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.